ಹೆಚ್.ಎಫ್.ಡಬ್ಲ್ಯು ೫೯ ಐಎಂಜ ೮೪ (೧೧) ದಿನಾಂಕ ೩-೭-೧೯೮೬ ರಲ್ಲಿ ೧-೪-೧೯೮೬ರಿಂದ ೧೦೦ ಪ್ರತಿಶತ ಕಾಲೇಜು ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗಕ್ಕೆ ಚೆಕ್ ಮುಖಾಂತರ ಸಂಬಳ ಪಾವತಿ ಮಾಡಲು ಆದೇಶ ನೀಡಿದೆ. ಇದರಲ್ಲಿ ವಿದ್ಯಾರ್ಥಿಗಳಿಂದ ಬಂದ ಶುಲ್ಕವನ್ನ ಎಲ್ಲಾ ಕಾಲೇಜುಗಳೂ ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಬೇಕೆಂದು ತಿಳಿಸಿರುತ್ತದೆ ಈ ರೀತಿ ೧೦೦ ಪ್ರತಿಶತ ಸಂಬಳವನ್ನು ಸಿಬ್ಬಂದಿ ವರ್ಗಕ್ಕೆ ಕೊಡುವುದರಿಂದ ಒಟ್ಟು ಸರ್ಕಾರದ ಬೊಕ್ಕಸಕ್ಕೆ ಒಂದು ವರ್ಷಕ್ಕೆ ತಗಲುವ ಅಂದಾಜು ವೆಚ್ಚ ೪೦ ಲಕ್ಷ ರೂಪಾಯಿಗಳಾಗುತ್ತದೆ; ಸಧ್ಯದಲ್ಲೇ ಈ ವೆಚ್ಚವನ್ನು ಏಪ್ರಿಲ್ ೧೯೮೬ ರಿಂದ ಪಾವತಿ ಮಾಡಲು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಇದರಲ್ಲಿ ನಿರ್ವಹಣಾ ವೆಚ್ಚ ಸೇರಿಲ್ಲ. ಕಾರಣ ೧೦೦ ಪ್ರತಿಶತ ಸಿಬ್ಬಂದಿ ವರ್ಗ ವಚ್ಚವನ್ನೆಲ್ಲಾ ಸರ್ಕಾರ ನಿರ್ವಹಿಸುವುದರಿಂದ ವ್ಯವಸ್ಥಾಪಕ ವರ್ಗದ ಹೊಣೆ ಸ್ವಲ್ಪ ಆವರ ಮೇಲೆ ಇರಲಿ ಎಂಬ ದೃಷ್ಟಿಯಿಂದ ಸರ್ಕಾರವೇ ಸಿಬ್ಬಂದಿಯ ಎಲ್ಲಾ ವೆಚ್ಚವನ್ನು ಭರಿಸುವುದರಿಂದ ವಿದ್ಯಾಲಯಗಳು ಆಡಳಿತ ಖರ್ಚನ್ನು ಕೆಲವಷ್ಟಿಗಾದರೂ ಹೊಸಬೇಕಾಗುತ್ತದೆ. ಒಂದು ವೇಳೆ ಎಲ್ಲಾ ವೆಚ್ಚವನ್ನೂ ಸರ್ಕಾರವೇ ಭರಿಸಿದರೆ ಇವು ಸರ್ಕಾರೀ ಕಾಲೇಜುಗಳು ಆಗುತ್ತವೆಯೇ ಹೊರತು ಖಾಸಗೀ ಕಾಲೇಜುಗಳು ಆಗುವುದಿಲ್ಲ. ಈ ರೀತಿ ಇಷ್ಟು ಸಹಾಯಧನ ಆಯುರ್ವೇದ ಕಾಲೇಜುಗಳಿಗೆ ಕೊಡುವುದು ಕರ್ನಾಟಕ ರಾಜ್ಯವಲ್ಲದೆ ಮತ್ಯಾವ ರಾಜ್ಯದಲ್ಲೂ ಇಲ್ಲ ಎಂದರೆ ಅತಿ ಶಯೋಕ್ತಿಯಾಗಲಾರದು.

V ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿಯಾಗಿ ದೀರ್ಘ ಸೇವೆ ಸಲ್ಲಿಸಿರುವ ವರನ್ನು ಖಾಯಂ ಮಾಡುವುದು

ಶ್ರಿ ಕೆ. ಹೆಚ್. ಪಾಟೀಲ್.—ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿ ಕೆಲಸ ಮಾಡಿದ ಅನೇಕ ನೌಕರರು ೧೫ ವರ್ಷಗಳಿಗಿಂತ ದೀರ್ಘವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದರೂ ಅವರನ್ನು ಹಂಗಾಮಿಯಾಗಿಯೇ ಮುಂದುವರಿಸಲಾಗಿದೆ. ಕರ್ನಾಟಕ ಲೋಕ ಸೇವಾ ಕಾನೂನಿನಲ್ಲಿ ಲೆ-ಟಿ-ಆಸಿಕ್ಕಿಂತ ಹಿಂದಿನ ಎಲ್ಲಾ ನೌಕರರನ್ನು ಖಾಯಂಗೊಳಿಸಬೇಕೆಂದು ತಿಳಿಸಿದ್ದರೂ ಸಹಾ ವಿಶ್ವವಿದ್ಯಾಲಯದವರು ಅದರ ವಿರೋಧವಾಗಿ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಆ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆಂದು ನಾನು ತಿಳಿಯ ಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಅಲ್ಲಿ ಹಂಗಾಮಿಯಾಗಿ ಕೆಲಸ ಮಾಡುತ್ತಿರುವ ಕೆಲವರು ಇನ್ನೂ ಇದ್ದಾರೆ. ಏನಾದರೂ ಮಾಡಿ ಅವರಿಗೆ ಅನುಕೂಲ ಮಾಡಿ ಎಂದು ಸರ್ಕಾರ ಕೂಡ ಆದೇಶವನ್ನು ಕೊಟ್ಟಿರುತ್ತದೆ, ಅಲ್ಲಿನ ಟೀಚರ್ಸ್‌ನ್ನು ಅಪಾಯಿಂಟ್ ಮಾಡುವ ಬಗ್ಗೆ ಪೋಡ್ ಆಫ್ ಅಪಾಯಿಂಟ್‌ಮೆಂಟೇ ಬೇರೆ. ಅಲ್ಲಿ ಬೋರ್ಡ್ ಆಫ್ ಅಥಾರಿಟಿ ಇದೆ. ಅಲ್ಲಿ ಅವರು ಅರ್ಜಿ ಹಾಕಬೇಕು. ಅಲ್ಲಿ ಕೆಲವರಿಗೆ ಸಿಕ್ಕಿರುವುದಿಲ್ಲ. ಸಿಕ್ಕದೇ ಇರುವವರಿಗೆ ಬೇರೆ ರೀತಿಯಲ್ಲಿ ಅನುಕೂಲ ಮಾಡಿ ಎಂದು ತಿಳಿಸಿದ್ದೇವೆ. ಆ ಬಗ್ಗೆ ಅವರ ಹತ್ತಿರ ಮಾತನಾಡಿ ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

VI ತರೀಕೆರೆ ತಾಲ್ಲೂಕು ನೇರಳೆಕೆರೆ ಗ್ರಾಮದ ಪಶುವೈದ್ಯಶಾಲೆಗೆ ಮುಂಜೂರಾತಿ ದೊರೆಯದಿರುವುದು

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ತರೀಕೆರೆ ತಾಲ್ಲೂಕು ನೇರಳೆಕೆರೆ ಗ್ರಾಮಕ್ಕೆ ೧೯೭೨ನೇ ಸಾಲಿನಲ್ಲಿ ಪಶುವೈದ್ಯ ಆಸ್ಪತ್ರೆ ಮಂಜೂರಾತಿಯಾಗಿದೆಯೆಂದು ಗ್ರಾಮಸ್ಥರು ಕಟ್ಟಡವನ್ನು ಕಟ್ಟಿರುತ್ತಾರೆಯಾದ್ದು ಇವರ ಪ್ರಾರಂಭೋತ್ಸವಕ್ಕೆ ಹಿಂದಿನ ಸಚಿವರು ಮತ್ತು ನಾನು ಹೋಗಿ ಪಾಪಸ್ ಬಂದಿರುತ್ತೆವೆ. ಈ ಆಸ್ಪತ್ರೆ ಮಂಜೂರಾತಿ ಕೊಡುತ್ತೇವೆಂದು ಸಧ್ಯದಲ್ಲಿ ಸಚಿವರು ಒಪ್ಪಿರುತ್ತಾರೆ. ಆದರೆ ಇಲ್ಲಿಯವರೆವಿಗೂ ಮಂಜೂರಾತಿ ದೊರೆತಿಲ್ಲ. ಆ ಗ್ರಾಮದಲ್ಲಿ ಮಾತ್ರ ಪಶುವೈದ್ಯ ಆಸ್ಪತ್ರೆ ಎಂದು ನಾಮ ಫಲಕ ಈಗಲೂ ಇದೆ. ಆದ್ದರಿಂದ ತಾವು ಯಾವಾಗ ಆಸ್ಪತ್ರೆ ಮಂಜೂರಾತಿ ಮಾಡುತ್ತೀರಾ ತಿಳಿಸಿ ಅಥವಾ ಆಸ್ಪತ್ರೆ ಕಟ್ಟಡವನ್ನು ಹರಾಜು ಮಾಡಿ ಪುನಃ ಅವರ ಹಣವನ್ನು ಪಡೆದುಕೊಳ್ಳಲೇ ಏನು ಮಾಡಲಿ ತಿಳಿಸಿ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ ಹಾಗೂ ಪಶು ಸಂಗೋಪನಾ ಮಂತ್ರಿಗಳು).—ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ನೇರಳೇಕೆರೆ ಗ್ರಾಮ ೧೯೮೨-೮೩ರ ಸರ್ಕಾರಿ ಆದೇಶ